ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ

ಸ್ವಚ್ಛ ಸಂಕೀರ್ಣ

ಜಲೋತ್ಸವ

ಮನೆ ಮನೆಗೆ ಗಂಗೆ
ಜಲ ಜೀವನ ಮಿಷನ್

# ಆತ್ಮವಿಶ್ವಾಸದಿಂದ ಸ್ವಚ್ಛ ವಾಹಿನಿ ಚಲಾಯಿಸುತ್ತಿರುವ ಶ್ರೀದೇವಿ



ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಮಲಘಾಣ ಗ್ರಾಮ ಪಂಚಾಯಿತಿಯು ಒಟ್ಟು 1971 ಕುಟುಂಬಗಳನ್ನು ಮತ್ತು 10,765 ಜನಸಂಖ್ಯೆಯನ್ನು ಹೊಂದಿದೆ. ಮಲಘಾಣ ಗ್ರಾಮ ಪಂಚಾಯಿತಿಯಲ್ಲಿ 4 ಗ್ರಾಮಗಳಿವೆ. ಇಲ್ಲಿನ ಜನರ ಮೂಲ ಉದ್ಯೋಗ ಕೃಷಿ ಆಗಿದೆ. ಮಲಘಾಣ ಗ್ರಾಮ ಪಂಚಾಯಿತಿಯ ಜನರು ಅನೈರ್ಮಲ್ಯದಿಂದಾಗಿ ಆರೋಗ್ಯ ಮತ್ತು ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದರು.

ಸರ್ಕಾರದ ಮಹತ್ವದ ಯೋಜನೆಯಾದ ಸ್ವಚ್ಛ ಭಾರತ ಮಿಷನ್(ಗ್ರಾ) ಜಾರಿಯಾದ ನಂತರ ಗ್ರಾಮದಲ್ಲಿ ಅನೇಕ ರೀತಿಯ ಬದಲಾವಣೆಗಳಾಗಿವೆ. ಗ್ರಾಮ ಪಂಚಾಯಿತಿಯು ಕೇಂದ್ರ ಮತ್ತು ರಾಜ್ಯ ಸರ್ಕಾರದ ನೆರವು ಹಾಗೂ ಗ್ರಾಮ ಪಂಚಾಯಿತಿಯ 15ನೇ ಹಣಕಾಸಿನ ನೆರವಿನಿಂದ ಸ್ವಚ್ಛ ವಾಹಿನಿ, ಸ್ವಚ್ಛ ಸಂಕೀರ್ಣ ಘಟಕ, ಕಸದ ಬುಟ್ಟಿ, ಹಾಗೂ ಇನ್ಸಿನರೇಟರ್ ಅನ್ನು ಖರೀದಿಸಿ ಸ್ವಚ್ಛತೆ ಹಾಗೂ ನೈರ್ಮಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದೆ.



ಕುಮಾರಿ ಶ್ರೀದೇವಿ ಅಶೋಕ ಕುರುಬತಳ್ಳಿ ರವರು ಮಲಘಾಣ ಗ್ರಾಮ ಪಂಚಾಯಿತಿಯ ಸ್ವಚ್ಛ ವಾಹಿನಿಯ ಚಾಲಕಿ. ಇವರ ವಯಸ್ಸು 20 ವರ್ಷ. ಇವರ ಕುಟುಂಬದಲ್ಲಿ ತಂದೆ, ತಾಯಿ ಮತ್ತು ತಮ್ಮಂದಿರನ್ನು ಸೇರಿ ಒಟ್ಟು 5 ಜನ ಸದಸ್ಯರಿದ್ದಾರೆ. ಕುಟುಂಬದ ಜವಾಬ್ದಾರಿಯನ್ನು ಹೊತ್ತು ವಾಹನ ಚಾಲನೆಯ ತರಬೇತಿ ಪಡೆದುಕೊಂಡು ಸ್ವಚ್ಛವಾಹಿನಿಯನ್ನು ಚಲಾಯಿಸುತ್ತಿದ್ದರೆ. ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಸ್ಫೂರ್ತಿಯಾಗಿ ಇವರು ಗ್ರಾಮದ ಸ್ವಚ್ಛತೆ ಹಾಗೂ ನೈರ್ಮಲ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ.

ಇವರು ಸ್ವಚ್ಛ ವಾಹಿನಿಯ ಚಾಲಕಿಯಾಗುವ ಹಾದಿ ಸುಲಭದ್ದಾಗಿರಲಿಲ್ಲ. ಮೊದಲಿಗೆ ಗ್ರಾಮದ ಜನರು ಓರ್ವ ಮಹಿಳೆ ಸ್ವಚ್ಛ ವಾಹಿನಿಯನ್ನು ಚಲಾಯಿಸುತ್ತಾಳೆ ಎಂದು ವಿರೋಧ ವ್ಯಕ್ತಪಡಿಸಿದ್ದರು. ಮನೆಯವರು ಸಹ ಮೊದಲಿಗೆ ಈ ವೃತ್ತಿಗೆ ಪ್ರೋತ್ಸಾಹ ನೀಡಿರಲಿಲ್ಲ. ಇದರಿಂದ ಶ್ರೀದೇವಿಯವರಲ್ಲಿ ಆತ್ಮ ವಿಶ್ವಾಸ ಕುಂದಿತ್ತು. ಅನೇಕ ಗ್ರಾಮಸ್ಥರ ಅವಹೇಳನ ಮತ್ತು ನಿಂದನೆಯನ್ನು ಎದುರಿಸಬೇಕಾಯಿತು. ಶ್ರೀದೇವಿಯವರಲ್ಲಿ ಭಯ ಮತ್ತು ಮುಂದಿನ ಭವಿಷ್ಯದ ಚಿಂತೆ ಕಾಡತೊಡಗಿತು.

ಈ ಸವಾಲುಗಳನ್ನು ಶ್ರೀದೇವಿಯವರು ಮತ್ತು ಗ್ರಾಮ ಪಂಚಾಯಿತಿ ಪ್ರತಿನಿಧಿಗಳು ಸಮರ್ಥ ರೀತಿಯಲ್ಲಿ ಎದುರಿಸಲು ತಯಾರಾದರು. ಗ್ರಾಮಸ್ಥರಿಗೆ ಅಧುನಿಕ ಪ್ರಪಂಚದಲ್ಲಿ ಮಹಿಳೆಯರು ವಿವಿಧ ಕ್ಷೇತ್ರದಲ್ಲಿ ಕೈಗೊಂಡ ಸಾಧನೆಗಳ ಬಗ್ಗೆ ಅರಿವು ಮೂಡಿಸಲಾಯಿತು.

"ಸಾರ್ವಜನಿಕರು ಹಾಗೂ ಸಂಬಂಧಿಕರು ಪ್ರಾರಂಭದಲ್ಲಿ ನಾನು ವಾಹನ ಚಲಾಯಿವುದನ್ನು ವಿರೋಧಿಸಿದರು. ನನ್ನ ತಂದೆ ತಾಯಿ ಸಹ ಇದಕ್ಕೆ ಸಹಕಾರ ನೀಡಲಿಲ್ಲ. ಜನಗಳ ಮಾತಿಗೆ ನಾನು ಅಂಜಿದ್ದೆ. ಇದು ನನ್ನಲ್ಲಿ ಭಯವನ್ನುಂಟು ಮಾಡಿತು. ಗ್ರಾಮ ಪಂಚಾಯಿತಿಯ ಪಿ.ಡಿ.ಓ. ಹಾಗೂ ಗ್ರಾಮ ಪಂಚಾಯಿತಿಯ ಪ್ರತಿನಿಧಿಗಳು, ಸಂಜೀವಿನಿ ಒಕ್ಕೂಟದ ಸದಸ್ಯರು ಗ್ರಾಮಸ್ಥರಲ್ಲಿ ಅರಿವು ಮೂಡಿಸಿ ನನಗೆ ಭಯ ಮುಕ್ತ ವಾತಾವರಣ ಸೃಷ್ಟಿಸಿದರು. ನಂತರ ನನ್ನ ಪೋಷಕರಿಗೂ ಯೋಜನೆಯ ಕುರಿತು ತಿಳಿಸಿದ ನಂತರ ಅವರು ಒಪ್ಪಿಗೆ ನೀಡಿದರು.

ವಾಹನ ಚಾಲನೆ ತರಬೇತಿಯನ್ನು ಪಡೆಯುವಾಗ ಜಿಲ್ಲಾ ಸ್ವಚ್ಛ ಭಾರತ ಮಿಷನ್(ಗ್ರಾ) ಯೋಜನಾ ನಿರ್ದೇಶಕರು, ಜಿಲ್ಲಾ ಸಮಾಲೋಚಕರು ನನ್ನಲ್ಲಿ ಆತ್ಮವಿಶ್ವಾಸವನ್ನು ತುಂಬಿದರು. ನನ್ನಿಂದ ಈ ವಾಹನ ಚಾಲನೆ ಸಾಧ್ಯ ಅನ್ನುವ ಭರವಸೆಯನ್ನು ತುಂಬಿದರು. ಇದರಿಂದ ನಾನು ಧೈರ್ಯವಾಗಿ ವಾಹನವನ್ನು ಚಲಾಯಿಸಲು ಸಾಧ್ಯವಾಯಿತು. ನನ್ನ ಗ್ರಾಮವನ್ನು ಸ್ವಚ್ಛ ಸುಂದರವನ್ನಾಗಿ ರೂಪಿಸಲು ನನ್ನ ಪಾತ್ರ ಮತ್ತು ಜವಾಬ್ದಾರಿಯನ್ನು ಅರ್ಥ ಮಾಡಿಕೊಂಡು ಓದಿನ ಜೊತೆಗೆ ವಾಹನ ಚಾಲನೆಯನ್ನು ಮಾಡುತ್ತಿದ್ದೇನೆ" ಎಂದು ಆತ್ಮವಿಶ್ವಾಸದಿಂದ ಶ್ರೀದೇವಿಯವರು ಮಾತನಾಡುತ್ತಾರೆ.






ಸ್ವಚ್ಛ ಭಾರತ ಮಿಷನ್(ಗ್ರಾ) ಯೋಜನೆಯು ಆರೋಗ್ಯಯುತ ಸಮಾಜ ನಿರ್ಮಾಣ ಮಾಡುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತಿದೆ. ಇದರಲ್ಲಿ ನಾವೆಲ್ಲರೂ ನಮ್ಮ ಜವಾಬ್ದಾರಿಯನ್ನು ಅರಿಯಬೇಕಾಗಿದೆ. ಆ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು, ಶಿಕ್ಷಣ ಸಂಸ್ಥೆಗಳು, ಮಕ್ಕಳು ಮತ್ತು ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸಬೇಕು.

ಒಬ್ಬ ಮಹಿಳೆಯು ಹಲವಾರು ಸಾಂಪ್ರದಾಯಿಕ ಕಟ್ಟಳೆ ಮತ್ತು ಸಾಮಾಜಿಕ ಕಾರಣಗಳಿಂದ ಅವಕಾಶವಂಚಿತಳಾಗುತ್ತಳೆ. ಆಧುನಿಕ ಯುಗದಲ್ಲಿ ಮಹಿಳೆಯು ಗಂಡಿಗೆ ಸರಿಸಮಳಾಗಿ ಎಲ್ಲ ಕ್ಷೇತ್ರಗಳಲ್ಲೂ ಸೇವೆಯನ್ನು ಸಲ್ಲಿಸುತ್ತಿದ್ದಾಳೆ. ಸ್ವಚ್ಛ ಭಾರತ ಮಿಷನ್(ಗ್ರಾ) ಯೋಜನೆಯು ಮಹಿಳಾ ಸಬಲೀಕರಣವನ್ನು ಉತ್ತೇಜಿಸುತ್ತದೆ. ಸಮಗ್ರ ಸಮುದಾಯದ ನೈರ್ಮಲ್ಯ ಮತ್ತು ಬೆಳವಣಿಗೆ ಯೋಜನೆಯ ಆಶಯವಾಗಿದೆ.

**ನೀರು ಮತ್ತು ನೈರ್ಮಲ್ಯ ಕುರಿತ ಸಮಸ್ಯೆಗಳಿಗೆ**
**ಪರಿಹಾರ ಸಹಾಯವಾಣಿ 9480985555 ಗೆ ಕರೆ ಮಾಡಿ**